★★★

ಮದರಂಗಿ ಎಲೆ ಹೆಣ್ಣುಮಕ್ಕಳ ಸುಕೋಮಲ ಕರಗಳನ್ನು ಸಿಂಗರಿಸುವಷ್ಟು ರಾಗರಂಜಿತವಾಗಬೇಕಾದರೆ ಅದಕ್ಕೆ ಬೇರೆ ಬೇರೆ ವಸ್ತುವಿಶೇಷಗಳನ್ನು ತಕ್ಕ ಪ್ರಮಾಣದಲ್ಲಿ ಬೆರೆಸಬೇಕಾದ ಅಗತ್ಯ ಇದ್ದೇ ಇದೆ. ಬದುಕೆಂದರೆ ಮತ್ತೇನು? ರಂಗು, ರುಚಿ ಕೊಡುವ ಭಾವನೆಗಳ ಮಿಲನವಾಗದಿದ್ದರೆ ಒಣಒಣ, ಬಣಬಣ. ಒಳಗೊಳಗೆ ಸಂಗ್ರಹವಾಗುತ್ತಿದ್ದ ಶ್ರೀಪಾದನ ಅಸಹನೆ ಒಂದಲ್ಲಾ ಒಂದು ದಿನ ಸ್ಫೋಟವಾಗುತ್ತದೆ, ಆಗದೆ ಎಲ್ಲಿ ಹೋಗುತ್ತದೆ ಎನ್ನುವ ನಿರೀಕ್ಷೆಯಲ್ಲಿದ್ದಳು ಪ್ರಭಾವತಿ. ಸ್ಫೋಟ ಆಗಿಯೇಬಿಟ್ಟಿತು. ಆದರೆ, ಅನಿರೀಕ್ಷಿತವಾದ ರೀತಿಯಲ್ಲಿ. ಅನಿರೀಕ್ಷಿತವಾದ ಕ್ರಿಯೆಯಲ್ಲಿ. ಅದು ಹಾಗಾಗಿದ್ದರಿಂದ ಇದು ಹೀಗಾಯ್ತು ಎನ್ನುವುದರಲ್ಲಿ ನಂಬಿಕೆ ಕ್ಷೀಣಿಸುತ್ತಾ ಬಂದಿದ್ದು ಕ್ರಮೇಣ ಆದಂತಹ ಬದಲಾವಣೆ. ಮನಸ್ಸು ತನ್ನನ್ನು ತಾನು ಒಪ್ಪಿಟ್ಟುಕೊಳ್ಳಲು ಕಂಡುಕೊಂಡ ಪಲಾಯನವಾದವೂ ಇದ್ದೀತು ಎಂದು ಪ್ರಭಾವತಿಗೆ ಅನಿಸುವುದಿದೆ.

ಮಗ ರಾಮಕೃಷ್ಣನಿಗೆ ಆಗ ಎಂಟು ವರ್ಷ. ಬೆಳಗಿನ ತಿಂಡಿ ಮುಗಿಸಿ ಅವನು ಇಸ್ಕೂಲಿಗೆ ಹೊರಟು ಹೋಗಿದ್ದ. ಶ್ರೀಪಾದ ತೋಟಕ್ಕೆ. 'ಶಿವ... ಶಿವಾ...' ಎನ್ನುತ್ತಾ ಮಾವನ ಸವಾರಿ ಮನೆಗೆ ಬಂತು. ಸೋದರಮಾವನ ಬರುವಿಕೆ ಆವತ್ತು ಸ್ವಲ್ಪ ಕಿರಿಕಿರಿ ಕೊಟ್ಟಿದ್ದು ಹೌದು. ಹಿಂದಿನ ರಾತ್ರಿ ಅರೆದು ಸಿದ್ಧಪಡಿಸಿದ್ದ ಮದರಂಗಿಯನ್ನು ತಲೆಗೆ ಹಚ್ಚಿಕೊಳ್ಳುವ ಕಾರ್ಯಕ್ರಮ ಹಾಕಿಕೊಂಡಿದ್ದಳು ಪ್ರಭಾವತಿ. ತಲೆಗೂದಲು ಬಿಳುಪು ತಿರುಗುವ ವಯಸ್ಸಲ್ಲದಿದ್ದರೂ ದೇಹದ ಉಷ್ಣತೆ ಕಮ್ಮಿಯಾಗುತ್ತದೆಯೆನ್ನುವ ಪ್ರತೀತಿಯಿದ್ದ ಮದರಂಗಿಯನ್ನು ಹೀಗೆ ಅಪರೂಪಕ್ಕೊಂದೊಂದು ಸಲ ತಲೆಗೆ ಹಚ್ಚಿಕೊಳ್ಳುವುದು ಅವಳಿಗೆ ಪ್ರಿಯವಾದ ಉದ್ಯೋಗ. ಮೆದುಳಿಗಿಳಿಯುತ್ತದೆಯೆನ್ನುವಷ್ಟು ತಂಪಾದ ಲೇಪನದಿಂದ ಮನಸ್ಸು ಪ್ರಶಾಂತವಾಗುತ್ತದೆಯೆಂದು ಅನಿಸಿಕೆ. ಲೋಕಾರೂಢಿಗೆಂಬಂತೆ ಕೇಳಿದ್ದಳು ಶೀನಿ ಮಾವನನ್ನು,

"ತಿಂಡಿ ಆಗಿದ್ಯಾ ಮಾವ?"

"ಅರೆರೇ, ಲಾಯ್ಕು ಉಪಚಾರ ಮಾಡ್ತಿದ್ದಿ ಕಣೇ. ಇಲ್ಲಿ ತಿಂಡಿ ತಿಂದ್ಕಂಡು ರಾಯರ ಮನೆ ಸತ್ಯನಾರಾಯಣ ಪೂಜೆಗೆ ಹೋಗೋದೂಂತ ನನ್ನ ಪ್ಲಾನು. ನಿಮಗೂ ಬಂದಿರ್ಬೇಕಲ್ಲಾ ಹೇಳಿಕೆ?"

"ಇಲ್ಲಪ್ಪಾ, ನಮಗ್ಗೊತ್ತಿಲ್ಲ. ನೀನು ಅವರ ಮಗನ ದೋಸ್ತಿ ಅಲ್ವಾ, ಕರೆದಿದಾರೇನೋ..."

"ಏನು ತಿಂಡಿ ಮಾಡಿದ್ದಿ? ಮುಗೀತಾ, ಏನಾರೂ ಶಿಲ್ಕು ಪಾತ್ರೆ ಬುಡದಲ್ಲುಂಟಾ?"

"ದೋಸೆ ಮಾರಾಯಾ, ಹಿಟ್ಟು ಬೇಕಾದಷ್ಟುಂಟು. ಅದೆಷ್ಟು ತಿಂತೀಯೋ ತಿನ್ನು."

ಕಾವಲಿ ಒಲೆಯ ಮೇಲಿಟ್ಟು ದೋಸೆ ಹುಯ್ದಿದ್ದಳು ಪ್ರಭಾವತಿ. ಜೋನಿ ಬೆಲ್ಲ, ತುಪ್ಪ ಹಾಕಿಕೊಂಡು ಸರಾಗವಾಗಿ ನಾಲ್ಕು ದೋಸೆ ತಿಂದಿದ್ದ ಶೀನಿ ಮಾವ. ಭರ್ತಿ ಒಂದು ಲೋಟ ಕಾಫಿ ಕುಡಿದು, "ಅನ್ನದಾತಾ ಸುಖೀಭವ..." ಎಂದು ಅಂಗೈ ಮುಂದೆ ಮಾಡಿ ಹರಸಿದ್ದ, ನಾಟಕೀಯವಾಗಿ.

"ನಾನು ಅನ್ನ ಹಾಕಿದ್ದಲ್ಲ, ದೋಸೆ ಕೊಟ್ಟಿದ್ದು..."

"ಯಾವುದಾದ್ರೇನು, ಪರಮಾತ್ಮನಿಗೆ ತೃಪ್ತಿಯಾದ್ರೆ ಸೈ."

ಆವತ್ತಿನ ಒಂದೊಂದು ಘಟನೆಯೂ, ಒಂದೊಂದು ಮಾತೂ ಅಚ್ಚಳಿಯದೆ ಪ್ರಭಾವತಿಯ ಮನಸ್ಸಲ್ಲಿ ಉಳಿದಿರುವುದಕ್ಕೆ ಸಕಾರಣವಿತ್ತು. ತಿಂಡಿ ತಿಂದ ಮಾವ ಹೊರಡುವ ಆತುರ ತೋರಿಸಿರಲಿಲ್ಲ.

"ಇಷ್ಟು ಬೇಗ ಅಲ್ಲಿಗೆ ಹೋಗಿ ಕೂತ್ಗಂಡು ನೊಣ ಹೊಡಿಯೋರ್ಯಾರು? ಮದ್ಯಾನ ಊಟದ ಹೊತ್ತಿಗೆ ಹೋದ್ರೆ ಸಾಕು..." ಎನ್ನುತ್ತಾ ಮುಂಚೇಕಡೆ ಮೇಜಿನ ಮೇಲಿದ್ದ ಹಿಂದಿನ ದಿನದ ಪೇಪರನ್ನು ಅವನು ಕೈಗೆತ್ತಿಕೊಂಡರೆ,